# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1119 |
| ಉತ್ತರಿಸಬೇಕಾಗದ ದಿನಾಂಕ | 18.12.2024 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೇರಾ ಕಾಯ್ದೆ ಜಾರಿಗೆ ಬಂದಿದ್ದು ಯಾವಾಗ; ಕಾಯ್ದೆಯ ಮೂಲ ಉದ್ದೇಶವೇನು; | ಕೇಂದ್ರ ಸರ್ಕಾರವು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016ಅನ್ನು ದಿನಾಂಕ:26.03.2016ರಿಂದ ಜಾರಿಗೆ ತಂದಿರುತ್ತದೆ. ಆದರಂತೆ ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ದಿನಾಂಕ:11.07.2017 ರಂದು ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017ಅನ್ನು ಅಧಿಕೃತವಾಗಿ ಜಾರಿಗೆ ತಂದಿರುವ ಹಿನ್ನಲೆಯಲ್ಲಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವನ್ನು ದಿ:14.07.2017ರಂದು ಸ್ಥಾಪಿಸಲಾಗಿರುತ್ತದೆ.<br><br>ರಿಯಲ್ ಎಸ್ಟೇಟ್ ಯೋಜನೆಗಳಲ್ಲಿ ಪಾರದರ್ಶಕತೆ, ಮನೆ/ವಸತಿ, ನಿವೇಶನ ಖರೀದಿದಾರರ ಹಿತಾಸಕ್ತಿ ರಕ್ಷಣೆ, ಖರೀದಿದಾರರು ಮತ್ತು ಡೆವಲಪರ್ ನಡುವೆ ಪ್ರಾಮಾಣಿಕ ಮತ್ತು ಪಾರದರ್ಶಕತೆ, ವ್ಯವಹಾರಗಳನ್ನು ಬೆಳೆಸುವುದು, ವಿವಾದ ಪರಿಹಾರ ಹಾಗೂ ರಿಯಲ್ ಎಸ್ಟೇಟ್ ಏಜೆಂಟ್‌ಗಳನ್ನು ನಿಯಂತ್ರಿಸುವುದು ಕಾಯ್ದೆಯ ಮೂಲ ಉದ್ದೇಶವಾಗಿದೆ. |
| ಆ) | ಈ ಕಾಯ್ದೆ ಸಮರ್ಪಕವಾಗಿ ಜಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಾರಣಗಳೇನು;; ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರೇರಾ ಪ್ರಾಧಿಕಾರದಿಂದ ಕಾಯ್ದೆಯನ್ನು ಸಮರ್ಪಕವಾಗಿ ಜಾರಿ ಮಾಡಲಾಗುತ್ತಿದೆ.<br><br>ರಾಜ್ಯದಲ್ಲಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಯೋಜನಾ/ ಅಭಿವೃದ್ಧಿ ಪ್ರಾಧಿಕಾರ ಹಾಗು ಸ್ಥಳೀಯ ಸಂಸ್ಥೆಗಳಿಂದ ಯೋಜನೆಗಳಿಗೆ ಅನುಮೋದನೆ ನೀಡುವ ಸಂದರ್ಭಗಳಲ್ಲಿ ರೇರಾ ನೋಂದಣಿ ಕಡ್ಡಾಯಗೊಳಿಸಲು ಷರತ್ತು ವಿಧಿಸುವ ಮತ್ತು ಅವಶ್ಯಕತೆಗನುಗುಣವಾಗಿ ಸಂಬಂಧಪಟ್ಟ ಕಾಯ್ದೆಗಳಿಗೆ ಸೂಕ್ತವಾಗಿ ತಿದ್ದುಪಡಿ ತರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ಪ್ರಾಧಿಕಾರದಿಂದ ಆದೇಶವಾಗುವ ಪ್ರಕರಣಗಳಲ್ಲಿ ಗೃಹ ಖರೀದಿದಾರರಿಗೆ ರೇವಣಿ ಹಣ / ಪರಿಹಾರ/ಬಡ್ಡಿ ಹಣವನ್ನು ಸುಸ್ತಿದಾರರಿಂದ ಭೂ ಕಂದಾಯ ಬಾಕಿ ಎಂದು ವಸೂಲಾತಿ ಮಾಡಲು ಒಂದು ವಿಶೇಷ ಕೋಶವನ್ನು ರಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. |

| | | |
|---|---|---|
| ಇ) | ರೇರಾ ಕಾಯ್ದೆಯಡಿ ಈವರೆಗೆ ಎಷ್ಟು ದೂರುಗಳು ದಾಖಲಾಗಿವೆ; ಈ ದೂರುಗಳ ಪೈಕಿ ಎಷ್ಟು ದೂರುಗಳಿಗೆ ಪರಿಹಾರ ಒದಗಿಸಲಾಗಿದೆ; ಬಾಕಿ ಇರುವ ದೂರುಗಳೆಷ್ಟು; (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಒಟ್ಟು 10,935 ದೂರುಗಳು ದಾಖಲಾಗಿದ್ದು, ಈ ಪೈಕಿ 7633 ಪ್ರಕರಣಗಳು ವಿಲೇಗೊಳಿಸಲಾಗಿದ್ದು, ಇನ್ನುಳಿದ ಪ್ರಕರಣಗಳ ವಿಚಾರಣೆ ಪ್ರಗತಿಯಲ್ಲಿದೆ.<br><br>(ಬಾಕಿ ಇರುವ ದೂರುಗಳ ವಿವರವನ್ನು **ಅನುಬಂಧ(ಸಿ.ಡಿ.)**ದಲ್ಲಿ ಒದಗಿಸಿದೆ). |
| ಈ) | ಕಾಯ್ದೆ ಉಲ್ಲಂಘಿಸುವ ಬಿಲ್ಡರ್‌ಗಳಿಗೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಈವರೆಗೆ ವಿಧಿಸಿರುವ ದಂಡದ ಮೊತ್ತ ಎಷ್ಟು; ದಂಡದ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ವಸೂಲಿ ಮಾಡಲಾಗಿದೆಯೇ; | **1)** ರೇರಾ ಕಾಯ್ದೆ, 2016ರ ಕಲಂ 4(2)(*l*)(D)ರಂತೆ ಯೋಜನೆಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳ ವಾರ್ಷಿಕ ವರದಿಯನ್ನು (Form-7ರಲ್ಲಿ) ಪ್ರಾಧಿಕಾರಕ್ಕೆ ಸಲ್ಲಿಸದೇ ಇರುವ ಪ್ರವರ್ತಕರಿಗೆ ಕಲಂ 60ರಡಿ ಪ್ರಾಧಿಕಾರದಿಂದ ದಂಡ ವಿಧಿಸಲಾಗುತ್ತದೆ.<br><br>**2)** ಪ್ರಸ್ತುತ 440 ಯೋಜನೆಗಳಿಗೆ ಸುಮಾರು ಒಟ್ಟು ರೂ.40.41ಕೋಟಿಗಳಷ್ಟು ದಂಡವನ್ನು ಪ್ರಾಧಿಕಾರವು ವಿಧಿಸಿರುತ್ತದೆ.<br><br>**3)** ಇದುವರೆವಿಗೂ 31 ಯೋಜನೆಗಳಿಂದ ದಂಡ ಮೊತ್ತ ಒಟ್ಟು ರೂ.34,10,138/-ಗಳು ವಸೂಲಾಗಿದ್ದು, ಪೂರ್ಣ ಪ್ರಮಾಣದಲ್ಲಿ ದಂಡ ವಸೂಲಿಯಾಗಿರುವುದಿಲ್ಲ. |
| ಉ) | ದಂಡದ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ವಸೂಲಿ ಮಾಡದಿರಲು ಕಾರಣಗಳೇನು; ಬಾಕಿ ಇರುವ ದಂಡದ ಮೊತ್ತವನ್ನು ವಸೂಲಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಕೆಲವು ಪ್ರಕರಣಗಳಲ್ಲಿ ತಡೆಯಾಜ್ಞೆ ನೀಡಿದ್ದು, ಉಳಿದ ಪ್ರಕರಣಗಳಲ್ಲಿ ರೇರಾ ಕಾಯ್ದೆಯ ಕಲಂ 40 ರಡಿಯಲ್ಲಿ ಭೂ ಕಂದಾಯ ಬಾಕಿ ವಸೂಲಾತಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ವಸೂಲಾತಿಗೆ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಕೋರಲಾಗಿರುತ್ತದೆ. ಪೂರ್ಣ ಪ್ರಮಾಣದಲ್ಲಿ ಬಾಕಿ ವಸೂಲಾತಿ ಮಾಡಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ರೇರಾ ಕಾಯ್ದೆಯನ್ವಯ ಅಧಿಕಾರವಿರುತ್ತದೆ. |

ಸಂಖ್ಯೆ: ವಇ 246 ರೇರಾ 2024]

B. Zameer

**(ಬಿ. ಝಡ್. ಜಮೀರ್ ಅಹಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು